**ದಿನಾಂಕಃ 21.03.2025 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ–ಸವಾಲುಃ ಪ್ರತಿವಾದಿ ಪರ ಶ್ರೀ ಡಿ.ಜಿ.ಜಿ. ವಕೀಲರಿಂದಃ–**

ನಾನು ರಾಮಚಂದ್ರಪ್ಪನವರ ತಾತ ಬುರುಜಿನ ಮಲ್ಲಪ್ಪನವರನ್ನು ನೋಡಿರುತ್ತೇನೆ. ಬುರುಜಿನ ಮಲ್ಲಪ್ಪನವರಿಗೆ ಕೆಂಚಮ್ಮ ಮೊದಲನೆ ಹೆಂಡತಿ ಮತ್ತು ತೋಪಮ್ಮ 2 ನೇ ಹೆಂಡತಿ ಇದ್ದರು ಎಂದರೆ ಸರಿ. ಕೆಂಚಮ್ಮನಿಗೆ ಸಣ್ಣಹನುಮಪ್ಪ ಎನ್ನುವ ಒಬ್ಬನೇ ಮಗ ಇದ್ದರು ಎಂದರೆ ಸರಿ. ಸದರಿ ಸಣ್ಣಹನುಮಪ್ಪನಿಗೆ ಹನುಮಂತಪ್ಪ, ಸಿದ್ದಪ್ಪ ಮತ್ತು ರಂಗಪ್ಪ ಅಂದರೆ 1 ರಿಂದ 3 ನೇ ಪ್ರತಿವಾದಿಯರು ಮಕ್ಕಳು ಎಂದರೆ ಸರಿ. ತೋಪಮ್ಮನವರಿಗೆ ಬುಡ್ಡಿ ಕೆಂಚಪ್ಪ, ಸಂಜೀವಪ್ಪ ಮತ್ತು ಓಬಣ್ಣ ಎಂಬ ಮೂರು ಜನ ಮಕ್ಕಳು ಇದ್ದರು ಎಂದರೆ ಸರಿ. ಬುಡ್ಡಿ ಕೆಂಚಪ್ಪನವರಿಗೆ ಬಿ.ಕೆ. ತಿಪ್ಪೇಸ್ವಾಮಿ ಮತ್ತು ಬಿ.ಕೆ. ಹನುಮಂತಪ್ಪ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ಸರಿ.

2. ಬಿ.ಕೆ. ತಿಪ್ಪೇಸ್ವಾಮಿಯವರಿಗೆ 4 ನೇ ಪ್ರತಿವಾದಿ ಕೆಂಚಮ್ಮ ಎನ್ನುವ ಹೆಂಡತಿ ಸತೀಶ, ಆಶಾ ಮತ್ತು ಓಬಳೇಶ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ. ಬಿ.ಕೆ. ತಿಪ್ಪೇಸ್ವಾಮಿಗೆ 4 ನೇ ಪ್ರತಿವಾದಿ ಒಬ್ಬಳೇ ಹೆಂಡತಿ ಎಂದರೆ ಸರಿಯಲ್ಲ ಅವರಿಗೆ ಇನ್ನೊಬ್ಬ ಹೆಂಡತಿ ಇರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಅವರು ಚಳ್ಳಕೆರೆ ತಾಲ್ಲೂಕಿನವರಾಗಿದ್ದರು. ಬಿ.ಕೆ. ತಿಪ್ಪೇಸ್ವಾಮಿಯವರಿಗೆ 4 ನೇ ಪ್ರತಿವಾದಿ ಮಾತ್ರ ಹೆಂಡತಿಯಾಗಿದ್ದರು ಎಂದರೆ ಸರಿಯಲ್ಲ.

3. ಬಿ.ಕೆ. ಹನುಮಂತಪ್ಪನವರಿಗೆ 6 ನೇ ಪ್ರತಿವಾದಿ ಪುಟ್ಟೀರಮ್ಮ ಒಬ್ಬರೇ ಹೆಂಡತಿ ಎಂದರೆ ಸರಿ. ಅವರಿಗೆ ಸಿದ್ದೇಶ ಮತ್ತು ಅಂಜಲಿ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ. 6 ನೇ ಪ್ರತಿವಾದಿ ಹನುಮಂತಪ್ಪನಿಗೆ ಒಬ್ಬಳೇ ಹೆಂಡತಿ ಎಂದರೆ ಸರಿ. ಓಬಣ್ಣನ ಹೆಂಡತಿ ಓಬಕ್ಕ ಜೀವಂತ ಇರುತ್ತಾರೆ. ಅವರಿಗೆ ಕೆಂಚಮ್ಮ, ಗಂಗಮ್ಮ ಮತ್ತು ಈ ಪ್ರಕರಣದ ವಾದಿ ರಾಮಚಂದ್ರಪ್ಪ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ.

4. ಬುರುಜನ ಮಲ್ಲಪ್ಪನಿಗೆ ಹೇಮದಳ ಸರ್ವೆ ನಂಬರ್‌ಃ151/2 ರಲ್ಲಿ 5 ಎಕರೆ 12 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಅದೇ ಊರಿನ ಸರ್ವೆ ನಂಬರ್‌ಃ262, 368 ತಲಾ ರಲ್ಲಿ 5 ಎಕರೆ 8 ಗುಂಟೆ ಜಮೀನು, ಸರ್ವೆ ನಂಬರ್‌ಃ53/1 ಬಿ ರಲ್ಲಿ 39 ಗುಂಟೆ ಜಮೀನುಗಳು ಬುರುಜನ ಮಲ್ಲಪ್ಪನಿಗೆ ಸೇರಿದ್ದವು ಎಂದರೆ ಸರಿ. ಬುರುಜನ ಮಲ್ಲಪ್ಪನ ಇಬ್ಬರು ಹೆಂಡತಿಯರು ಕೆಂಚಮ್ಮ ಮತ್ತು ತೋಪಮ್ಮ ಅವರನ್ನು ನಾನು ನೋಡಿರುತ್ತೇನೆ. ಅವರಿಬ್ಬರೂ ಒಟ್ಟಿಗೆ ವಾಸವಾಗಿದ್ದರು. ನಂತರ ಮಕ್ಕಳು ದೊಡ್ಡವರಾದ ಮೇಲೆ ಬೇರೆಯಾಗಿರುತ್ತಾರೆ.

5. ತೋಪಮ್ಮನ ಮಕ್ಕಳು ಸಂಜೀವಪ್ಪ ಮತ್ತು ಓಬಣ್ಣ ಈ ಮೇಲೆ ಹೇಳಿದ ನಾಲ್ಕು ಆಸ್ತಿಗಳನ್ನು 1963 ರಲ್ಲಿ ಸಿದ್ದಣ್ಣ ತಂದೆ ದೊಡ್ಡಮಲ್ಲಪ್ಪ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವರು ಸದರಿ ಕ್ರಯವನ್ನು ಕೆಂಚಮ್ಮ ಮತ್ತು ಅವರ ಮಕ್ಕಳಿಗೆ ತಿಳಿಯದಂತೆ ಮಾಡಿದ್ದರು ಎಂದರೆ ಸರಿಯಲ್ಲ. ದಿನಾಂಕಃ27.12.1988 ರಂದು ಸಣ್ಣ ಹನುಮಪ್ಪನ ಮಕ್ಕಳು 1 ರಿಂದ 3 ನೇ ಪ್ರತಿವಾದಿಯರು ಈ ಮೇಲೆ ಹೇಳಿದ ಆಸ್ತಿಗಳಲ್ಲಿ ದಾವಾ ಆಸ್ತಿಗಳನ್ನು ತಮ್ಮ ಪಾಲಿಗೆ ಬಿಡಿಸಿಕೊಂಡಿರುತ್ತಾರೆ ಎಂದರೆ ಸರಿ. ಅದೇ ಸಮಯದಲ್ಲಿ ಸಿದ್ದಣ್ಣನವರಿಂದ ದಾವಾ ಆಸ್ತಿಗಳಿಗೆ ಕ್ರಯಪತ್ರ ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

6. ಕ್ರಯಪತ್ರದಂತೆ ದಾವಾ ಆಸ್ತಿಗಳನ್ನು 1 ರಿಂದ 3 ನೇ ಪ್ರತಿವಾದಿಯರು ಖಾತೆ ಬದಲಾಯಿಸಿಕೊಂಡು ಪ್ರತ್ಯೇಕ ಅನುಭವ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ವಾದಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಅವರ ಚಿಕ್ಕಪ್ಪ ಮತ್ತು ದೊಡ್ಡಪ್ಪನ ಭಾಗದ ಆಸ್ತಿಗಳು ಸಿದ್ದಣ್ಣನವರ ಬಳಿ ಉಳಿದಿರುತ್ತವೆ ಎಂದರೆ ಸರಿಯಲ್ಲ. ವಾದಿ ಯಾವತ್ತೂ ಸಹ 1 ರಿಂದ 3 ನೇ ಪ್ರತಿವಾದಿಯರ ಬಳಿ ಭಾಗ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಯಾವುದೇ ಭಾಗ ಆಗಿರುವುದಿಲ್ಲ ಎಂದರೆ

ಸರಿಯಲ್ಲ. ವಾದಿಗೆ ಸಹಾಯ ಮಾಡಲು ದಾವಾ ಆಸ್ತಿಯಲ್ಲಿ ವಾದಿಗೆ ಭಾಗ ಇಲ್ಲದೇ ಇದ್ದರೂ ಸಹ ಇರುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.